


International Journal of Kannada Research
www.kannadajournal.com

ISSN: 2454–5813
IJKR 2023; 9(1): 160-163
© 2023 IJKR
www.kannadajournal.com
Received: 14-10-2022
Accepted: 18-11-2022

**ಸುಭಾಷ ವಾಲಿಕಾರ**
ಸಂಶೋಧನ ವಿದ್ಯಾರ್ಥಿ
ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

**ಡಾ. ವಾಮದೇವ ಎಚ್. ತಳವಾರ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

**Corresponding Author:**
**ಸುಭಾಷ ವಾಲಿಕಾರ**
ಸಂಶೋಧನ ವಿದ್ಯಾರ್ಥಿ
ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

# ಆನಂದಕಂದರ ‘ವಿರಹಿಣಿ’ ಕಾವ್ಯದಲ್ಲಿ ದೇಸಿಯತೆ

**ಸುಭಾಷ ವಾಲಿಕಾರ, ಡಾ. ವಾಮದೇವ ಎಚ್. ತಳವಾರ**

## ಪೀಠಿಕೆ

‘ದೇಸಿಯತೆ’ ಎಂಬುದು ಮುಖ್ಯವಾಗಿ ಒಂದು ಮನೋಧರ್ಮವಾಗಿದೆ. ಅದು ಸಾಹಿತ್ಯದಲ್ಲಿ ಅಭಿವ್ಯಕ್ತಿಗೆ ಸಂಬಂಧಿಸಿದ ಮೇರೆ ಹಾಗೂ ತಾತ್ವಕತೆಯ ಒಳಗೆ ಕೆಲಸ ಮಾಡುವ ವಿಧಾನವಾಗಿದೆ. ‘ದೇಸಿಯತೆ’ಯು ಒಂದು ಜನಾಂಗದ ಸಂಸ್ಕೃತಿಯ ಭಾಗವಾಗಿ ಮೂಡಿಬರುತ್ತದೆ. ಅದು ಬಹುಮುಖ್ಯವಾಗಿ ಜಾನಪದಿಯವಾಗಿರುತ್ತದೆ. ಜೊತೆಗೆ ಜನಮುಖಿಯಾಗಿರುತ್ತದೆ. ದೇಸಿಯತೆಗೆ ಒಂದು ಸೈದ್ಧಾಂತಿಕ ನೆಲೆಗಟ್ಟವನ್ನು ಸೃಷ್ಟಿಸಿಕೊಳ್ಳುವ ಅನಿವಾರ್ಯತೆ ಎಂದಿಗಿಂತಲೂ ಇಂದು ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಆನಂದಕಂದರ ‘ವಿರಹಿಣಿ’ ಕವನ ಸಂಕಲನದಲ್ಲಿನ ದೇಸಿಯತೆಯ ನೆಲೆಗಳನ್ನು ಶೋಧಿಸಿವ, ಹುಡುಕುವ ಪ್ರಯತ್ನವನ್ನು ಪ್ರಸ್ತುತ ಲೇಖನದಲ್ಲಿ ಮಾಡಲಾಗಿದೆ. ಆನಂದಕಂದರು ರಚಿಸಿರುವ ‘ವಿರಹಿಣಿ’ ಕವನ ಸಂಕಲನವು ವಿರಹ ಭಾವವನ್ನು ಪ್ರಧಾನವಾಗಿ ಪ್ರಕಟಗೊಳಿಸಿದ್ದರೂ, ಇಲ್ಲಿನ ಪದ್ಯಗಳು ಐಂದ್ರಿಕ ನೆಲೆಯ ಪ್ರಣಯವನ್ನು ವಿರಹದ ಮೂಲಕ ಕಟ್ಟಿಕೊಡುತ್ತದೆ.

ಆನಂದಕಂದರ ‘ವಿರಹಿಣಿ’ ಕವನ ಸಂಕಲನದಲ್ಲಿ ದೇಸಿಯತೆಯ ಕುರಿತಾದ ಅನೇಕ ಅಂಶಗಳು ಮೂಡಿಬಂದಿವೆ. ಈ ಕವನ ಸಂಕಲನದಲ್ಲಿ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನಗಳೊಂದಿಗೆ ಮುಖಾಮುಖಿಯಾಗುತ್ತಲೆ ದೇಸಿಯತೆಯ ನೆಲೆಯನ್ನು ಕಂಡುಕೊಳ್ಳಬಹುದಾಗಿದೆ. ವಿರಹವೇ ಇಲ್ಲಿನ ಕವಿತೆಗಳ ಪ್ರಧಾನ ಜೀವಾಳವಾಗಿದ್ದರೂ, ಅಪೇಕ್ಷೆ, ಅಭೀಪ್ಸೆ, ಹರ್ಷ, ದುಃಖ, ನಿರಾಸೆ, ಸಂಭ್ರಮ, ಸಡಗರ, ಕೃತಘ್ನತೆ, ಉಪಕಾರ, ಕೇಡು, ಸಹಾಯ, ತಾಳ್ಮೆ, ಅನ್ಯೋನ್ಯತೆ, ಬಿಕ್ಕಳಿಕೆ, ಗದ್ಗದಿಸುವಿಕೆ, ಬಯಕೆ, ಕನಸುಗಾರಿಕೆ, ಕನವರಿಕೆ ಮೊದಲಾದ ಸೂಕ್ಷ್ಮ ಮನೋಲೋಕದ ಸಂವೇದನೆಗಳು ಪ್ರಕಟವಾಗಿವೆ. ಆನಂದಕಂದರು ವಿರಹಣಿಯಲ್ಲಿನ ಕವಿತೆಗಳನ್ನು ಐಂದ್ರಿಕ ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ರಾಘವೇಂದ್ರ ಪಾಟೀಲ ಅವರು ಇಲ್ಲಿನ ವಿರಹದ ಕುರಿತು ಪ್ರಸ್ತಾಪಿಸುತ್ತ, “ಈ ವಿರಹ ಮುಖ್ಯವಾಗಿ ಪ್ರಾಯದ ಗಂಡು ಹೆಣ್ಣುಗಳ ನಡುವಿನ ಅಗಲಿಕೆಯಾಗುತ್ತದೆಯೇ ಹೊರತು ಅಧ್ಯಾತ್ಮದ ನೆಲೆಯ ಗ್ರಹಿಕೆಯಾಗುವುದಿಲ್ಲ”[೧] ಎಂದಿದ್ದಾರೆ. ಈ ಕವನ ಸಂಕಲನವು ಹೆಣ್ಣಿನ ವಿರಹಭಾವವನ್ನು ಮನಕಲಕುವಂತೆ ತಿಳಿಸುವ ಪ್ರಣಯಗೀತೆಗಳನ್ನು ಒಳಗೊಂಡಿದೆ. ಆನಂದಕಂದರು ಪ್ರೇಮ ಭಾವದ ಮೂಲಕವೇ ಇಲ್ಲಿ ವಿರಹದ ನೂರಾರು ತರಹಗಳನ್ನು ಕಟ್ಟಿಕೊಟ್ಟಿದ್ದಾರೆ. ಈ ಕವನ ಸಂಗ್ರಹವು ಇಪ್ಪತ್ತೂರು ಕವಿತೆಗಳನ್ನು ಒಳಗೊಂಡಿದೆ. ಈ ಕವನ ಸಂಕಲನದಲ್ಲಿ ‘ಹೂಮಾಲೆ’, ‘ಅತೃಪ್ತಿ’, ‘ಅಗಲಿಕೆ’, ‘ಉಪ್ಪರಿಕೆ’, ‘ನಾಚಿಕೆ’, ‘ತೊಡಕು’, ‘ಒಲವಿನಾಟ’, ‘ಅವನ ಕತೆ’, ‘ಆಗಿದ್ದರೆ’, ‘ನಿರೀಕ್ಷೆ’, ‘ಕರೆವೆನೇನೆಂದು?’, ‘ಏನಿದ್ದೇನು!’, ‘ಅಭಿಮಾನ’, ‘ಮಿಂಚಿನಮಾಟ’, ‘ಬೇಡವೆನಗಿನ್ನೇನು!’, ‘ಕೊರಗುತಿರುವೆದೆಗೆ ಬರೆ’, ‘ಹಾರಯ್ಕೆ’, ‘ಯಾವ ದಾರಿಯೋ!’, ‘ಉನ್ಮಾದಿನಿ’, ‘ನನ್ನ ಹಾಡು’, ‘ಹೂವಾಡಗಿತ್ತಿ’, ‘ಶಬರಿಯ ಬಾಳು’ ಮತ್ತು ‘ಕೋರಿಕೆ’ ಕವಿತೆಗಳಿವೆ. ಈ ಪದ್ಯಸಂಕಲನದಲ್ಲಿನ ಕವಿತೆಗಳ ಶೀರ್ಷಿಕೆಯಲ್ಲಿ ವಿರಹದ ಛಾಯೆ ಸ್ಪಷ್ಟವಾಗಿ ಕಂಡುಬರುತ್ತದೆ. ಕನ್ನಡ ಪ್ರೇಮಗೀತೆಗಳ ಸಾಲಿನಲ್ಲಿ ‘ವಿರಹಿಣಿ’ಗೆ ಒಂದು ವಿಶಿಷ್ಟ ಸ್ಥಾನವಿದೆ. ಇದರಲ್ಲಿನ ‘ಶಬರಿಯ ಬಾಳು’ ಕವಿತೆಯ ಸ್ವತಂತ್ರ ಖಂಡಕಾವ್ಯದಂತಿದೆ. ಇಲ್ಲಿಯ ಭಾವಗೀತೆಗಳನ್ನು ಹಾಡಲು ಅನುಕೂಲವಾಗುವಂತೆ ರಾಗಗಳ ಹೆಸರನ್ನು ಕವಿ ಸೂಚಿಸಿದ್ದಾರೆ. ಈ ಸಂಕಲನದ ಮೊದಲ ಕವಿತೆ ‘ಹೂಮಾಲೆ’ಯು ಪ್ರಣಯದ ಉತ್ಕಟ ವಿರಹ ಭಾವವನ್ನು ಪ್ರಕಟಪಡಿಸಿದೆ.

"ಯಾರಿಗರುಪಿಸಲಿದನು ಮಾಲೆಯ
ನಾರ ಕಪರಳೊಳಗಿರಿಸಲಿ?
ಯಾರಿಗೊಪ್ಪಿಸಿ ಕಣ್ಣೆದೆಯ ಬಾ
ಯಾರಿಕೆಯನಂತರಿಸಲಿ?"[೨]

ಆನಂದಕಂದರ 'ಅತೃಪ್ತಿ' ಕವಿತೆಯು ಕೂಡ ಹೆಣ್ಣಿನ ವಿರಹದ ಮತ್ತೊಂದು ಮಗ್ಗುಲನ್ನು ತೆರೆದು ತೋರಿಸುತ್ತದೆ. ಸಮವಯದ ಗೆಳತಿಯರೆಲ್ಲ ಚಿನ್ನ ರನ್ನದೊಡವೆಗಳನ್ನು, ಹೊಸ ಸೀರೆ, ಕುಪ್ಪಸ ತೊಟ್ಟು ನಕ್ಕು ನಲಿಯುತ್ತಿದ್ದಾರೆ. ಆದರೆ ಈ ಕವಿತೆಯ ನಾಯಕಿಗೆ ತೃಪ್ತಿಯೇ ಇಲ್ಲ. ಅವಳು 'ಎಲ್ಲಿದೆಲ್ಲಿದೆ ತಣಿವು? ಏತರಲ್ಲಿದೆ ತಣಿವು?, ಎಲ್ಲಿಯೆಲ್ಲಿಯು ಕಾಣಲೊಲ್ಲದಾ ತಣಿವು!' ಎಂದು ಅತೃಪ್ತಿಯನ್ನು ವ್ಯಕ್ತಪಡಿಸುತ್ತಾಳೆ. ಆಕೆ ಮನದಲ್ಲಿ ಮನೆಮಾಡಿರುವ ದುಗುಡವನು ತೆಗೆದು, ತನಗೆ ತಣಿವನೀವಾ ಒಡವೆ ದೊರೆಯುವುದೆಂದು ಎಂಬ ಚಿಂತೆಯಲ್ಲಿದ್ದಾಳೆ.
'ಅಗಲಿಕೆ' ಕವಿತೆಯಲ್ಲಿ ಆನಂದಕಂದರು 'ಶಿವಶರಣೆ ಅಕ್ಕಮಹಾದೇವಿ'ಯ ಚೆನ್ನಮಲ್ಲಿಕಾರ್ಜುನನ್ನು ಅರಸುವ ಪರಿಯನ್ನು ನೆನಪಿಸುತ್ತಾರೆ. ಆದರೆ ಇಲ್ಲಿಯ ನಲ್ಲೆ ಮನದನ್ನನನ್ನು ಅಗಲಿದ ವಿರಹದ ಭಾವವು ಐಂದ್ರಿಕ ನೆಲೆಯಲ್ಲಿ ಉಳಿದು ಬಿಡುತ್ತದೆ.

"ಅಗಲಿಕೆಯೆ, ನಿನ್ನಗಲನಳೆಯುವವರಾರು?
ಬಗೆಯೊಲವೆ ನಿನ್ನ ನೆಲೆ ತಿಳಿಯುವರಾರು?"[೩]

ನಂದಕಂದನನಗಲಿದ ಗೋವಳತಿಯರು ಅಡವಿಯಲಿ ಅಲೆದಾಡಿ ಹುಡುಕಿದಂತೆ ಈ ಕವಿತೆಯ ನಾಯಕಿ ಹುಲ್ಲೆಯನ್ನು, ಕೋಗಿಲೆಯನ್ನು, ಗಿಳಿಹಿಂಡನ್ನು, ಅಳಿಕುಳವನ್ನು, ಹಕ್ಕಿಗಳನ್ನು, ಹಸುಗಳು, ಕೋತಿ, ಮರಬಳ್ಳಿ, ಕೆರೆತೊರೆ, ಹೊಳೆ, ಬೆಟ್ಟ, ಮುಗಿಲು, ಸೂರ್ಯ, ಅಲರು, ಬನಸಿರಿ ಇತ್ಯಾದಿಗಳಲ್ಲಿ ಇನಿಯನ ದಾರಿ ತೋರಿ ಎಂದು ಕೇಳಿಕೊಳ್ಳುವ ಪರಿಯು ಹೃದಯ ಮಿಡಿಯುವಂತೆ ಮೂಡಿಬಂದಿದೆ.
ಆನಂದಕಂದರು ಹೆಣ್ಣುಮಕ್ಕಳ ಮನದ ಆಶೆ, ನಿರಾಶೆ, ನೋವು, ದುಃಖ, ಹತಾಶೆಗಳನ್ನು ಹಲವು ಕವಿತೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಅವರ 'ಉಪ್ಪರಿಗೆ' ಕವಿತೆ ಗಝಲ್ ಆಗಿದ್ದು, ಇದರಲ್ಲಿಯೂ ಕೂಡ ನಲ್ಲನನ್ನು ಹುಡುಕುವ ನಲ್ಲೆಯ ಚಿತ್ರಣವಿದೆ. 'ನಾಚಿಕೆ' ಕವಿತೆಯಲ್ಲಿ ಹೆಣ್ಣುಮಗಳೊಬ್ಬಳು 'ನಾಣಿಲಿ'ಯು ಇವಳೆಂದು ಜನ ನಗುತ್ತಾರೆಂದು ಭಾವಿಸಿ, ನಾಚಿಕೆಯಿಂದ ಮನದನ್ನನ ಮುಖವನ್ನು ಕೂಡ ನೋಡದೆ ಬದುಕನ್ನು ಬರಿದು ಮಾಡಿಕೊಂಡು ದುಃಖಕ್ಕಿಡಾದ ಸನ್ನಿವೇಶವಿದೆ. 'ತೊಡಕು' ಕವಿತೆಯಲ್ಲಿ ಚೆಲುವು ಹಿರಿಯದೋ ಇಲ್ಲವೇ ಹೃದಯದ ಒಲವು ಹಿರಿಯದೋ ಎಂಬ ತೊಡಕನ್ನು ಕಾಣುತ್ತೇವೆ. 'ಕೊಳಲನೂದಿ ಅಳಲ ಮರೆತೆ, ಉಲಿಯೆ ವೀಣೆಯದಕೆ ಬೆರತೆ, ಮೆಲುಪು ಬಲಿದ ರಾಗದೋರಿ ಕಳೆದೆ ಕಾಲ ಸೊಗವ ಸಾರಿ' ಎನ್ನುತ್ತ ಒಲವಿನ ತೊಡಕನ್ನು ಬಿಡಿಸಲು ತೊಡಗುತ್ತಾರೆ.

"ಇದ್ದುದಿದ್ದ ಹಾಗೆ ಹೃದಯ
ಎದ್ದು ನಡೆಯಿತೆಲ್ಲಿಗೇನೋ!
ಬಿದ್ದು ಹೋಯ್ತು ಗಾನದಲ್ಲಿ
ಇದ್ದ ಸೊಬಗದೇತಕೇನೊ!" (ಪು.೯)

ಸವಿ ಒಲವಿನ ಸುಳಿ ಮಾಯವಾದ ಬಗೆಯನ್ನು ಕವಿ ಪ್ರಕಟಗೊಳಿಸುತ್ತಲೇ 'ಕೊಳಲ ಸವಿ ತಿಳಿಯದಾಯಿತು. ವೀಣೆಯುಲುಹು ಕಾಣದಾಯ್ತು, ಚೆಲುವ ರಾಗದೆಳೆಯೆ ಹೋಯ್ತು, ಮಲಗಿಬಿಟ್ಟೆ ಹಾಗೆ ಮರಳಿ' ಎನ್ನುತ್ತ ಕೊನೆಗೆ ಕವಿ ಹೃದಯದ ಒಲವು ಹಿರಿಯದು ಎಂದು ಸಾಧಿಸುವ ಪರಿ ಅಚ್ಚರಿಯಾದುದು. ಲೋಕದಲ್ಲಿ ಹೆಣ್ಣು-ಗಂಡಿನ ನಡುವಿನ ಒಲವಿನಾಟ ವಿಚಿತ್ರವಾದುದು. ಒಲವು ಬೇಕಾದರೆ ಮಾವು, ಬೇಡವಾದರೆ ಬೇವು ಎನ್ನುತ್ತಾರೆ ಕವಿ. ಹೃದಯದ ಒಲವು ಹೊರಗಿನ ಕಾರಣಗಳನ್ನು ಆಸರಿಸದು. 'ಒಳಗಿರುವ ಯಾವುದೋ ಸೆಳೆತವು ಒಲವಿನ ಎದೆಗಳನು ಬಿಗಿಯುವುದು' ಎಂದು ಕವಿ ಭವಭೂತಿ ಹೇಳಿರುವದನ್ನು ಆನಂದಕಂದರು 'ಒಲವಿನಾಟ' ಕವಿತೆಯಲ್ಲಿ ಉಲ್ಲೇಖಿಸುತ್ತಾರೆ. ಇದು ಲೋಕಸತ್ಯ ನುಡಿಯಾಗಿದೆ. 'ಅವನ ಕತೆ' ಕವಿತೆಯಲ್ಲಿ ನಲ್ಲೆಯ ನಲ್ಲನ ಏಳಿಗೆಯ ಕತೆಯಿದೆ. ಆತನ ಸ್ನೇಹದ, ಒಲವಿನ ಆಪ್ತ ಸಂವಾದವಿದೆ. ಆದರೂ ಆತ ನಲ್ಲೆಗೆ ಒಲಿಯದೇ ಇರುವುದು ಅವಳಿಗೆ ಕೌತುಕವೆನಿಸಿದೆ. 'ಆಗಿದ್ದರೆ..!' ಕವಿತೆಯು ಕೇವಲ ನಿರೀಕ್ಷೆಗಳನ್ನು ಒಳಗೊಂಡ ರಚಿತವಾಗಿದೆ. ಆದರೆ 'ನಿರೀಕ್ಷೆ' ಕವಿತೆಯು ನಲ್ಲನ ದಾರಿ ಕಾಯುವ ನಲ್ಲೇಯ ಚಿತ್ರಣವನ್ನು ಒಳಗೊಂಡಿದೆ.

"ಮೂರು ದಿನಗಳು ಜಾರಿದವು, ಬರಿ
ದಾರಿ ಕಾಯುತಲಿರುವೆನು
ಹಾರಯಿಕೆಯೆಂತಹದು! ನನ್ನವ
ಬಾರನೇಕೆನುರಿರುವೆನು."[೪]

ಈ ಕವಿತೆಯಲ್ಲಿ ಹೊರಗಿನ ಒಂದೊಂದು ಸದ್ದು ಕೂಡ ನಲ್ಲೆಯ ಮೈ ಜುಮ್ಮೆನಿಸುತ್ತದೆ. ಆದರೂ ಅವಳ ಇನಿಯ ಬರದೇ ಕೇವಲ ಆತ ಬರುವ ನಿರೀಕ್ಷೆಯಲ್ಲಿ ಅವಳು ಬೇಸರದಿಂದ ಕಾಲ ಕಳೆಯುವ ಚಿತ್ರಣವಿದೆ. ನಲ್ಲೆಯಾದವಳು ನಲ್ಲನನ್ನು ಕರೆಯುವ ವಿಭಿನ್ನ ರೀತಿ 'ಕರೆವೆನೇನೆಂದು' ಕವಿತೆಯಲ್ಲಿ ಮೂಡಿಬಂದಿದೆ. ಅವಳು ಕರೆಯುವ ರೀತಿಯೇ ಸೊಗಸಾದುದು. ಚೆಲ್ವ, ಪ್ರೀಯವಲ್ಲಭಾ, ನಲ್ಲ, ಚೆನ್ನ, ರನ್ನ, ನನ್ನೊಲವೆ, ಮನಮೋಹನಾ, ಪ್ರೇಮವನದಿ, ಪ್ರಾಣಪ್ರಿಯಾ, ಮನದಿನಿಯ, ಚಿತ್ತರಂಜನ, ಉತ್ತಮೋತ್ತಮ, ಮುತ್ತು-ಮಾಣಿಕ, ಅರಗಿಳಿಯೆ, ನರಸಿಂಹ, ಕರದ ಕಂಕಣ, ಕೊರಳಮಣಿ, ಸಿರಿಮುಡಿಯ ಸೌಭಾಗ್ಯ ಎಂದು ನಲ್ಲೆ ಕರೆಯಲೇ ಎನ್ನುತ್ತಾಳೆ. ಆದರೂ ಅವಳಿಗೆ ತೃಪ್ತಿ ಇಲ್ಲ. ಯಾವ ಹೆಸರಿನಿಂದ ಕರೆದರೂ ಆತ ಕಾಂಬನು. ದೇವನೇ ಎನಿಸುವ ಆತನನ್ನು ಯಾವ ಹೆಸರಿನಿಂದ ಕರೆಯಲಿ? ಎಂದು ನಲ್ಲೆ ತನ್ನನ್ನೇ ತಾನು ಪ್ರಶ್ನಿಸಿಕೊಳ್ಳುತ್ತಾಳೆ. ಸಾಂಪ್ರದಾಯಕವಾಗಿ ಬೇಳೆದ ಹೆಣ್ಣು ಮಗಳು ತನ್ನ ಬದುಕಿಗೆ ಏನು ಬೇಕು ಎಲ್ಲವನ್ನೂ ಹೊಂದಿಸಿಕೊಳ್ಳುತ್ತಾಳೆ. ಆದರೆ ನಲ್ಲನೇ ಇರದಿದ್ದರೇ ಅವಳ ಬಾಳಿನ ಪಾಡು ಹೇಳತೀರದು. ಅದು 'ಏನಿದ್ದೇನು' ಕವಿತೆಯಲ್ಲಿ ವಿಶಿಷ್ಟವಾಗಿ ಮೂಡಿಬಂದಿದೆ.

"ಏನನೆಲ್ಲವ ಮಾಡಿರುವೆ, ಇ
ನ್ನೇನ ಮಾಡುವೆ ನಲ್ಲ?
ನೀನು ಇಲ್ಲದೆ ಇರಲು ಏನಿ
ದ್ದೇನು? ನಿಷ್ಫಲವೆಲ್ಲ!"[೫]

ಆನಂದಕಂದರ 'ಅಭಿಮಾನ' ಕವಿತೆಯು ಕೂಡ ನಲ್ಲೆಯಿಂದ ದೂರಾದ ನಲ್ಲನ ನೆನಪಾಗಿ ನಲ್ಲೆ ವಿರಹ ಪಡುವ ಚಿತ್ರಣವನ್ನು ಒಳಗೊಂಡಿದೆ. ನಲ್ಲನ ನೆನಪು ಕಾಡುವ ಪರಿಗೆ ನೋವು ಪಡುವ ನಲ್ಲೆಯ ಚಿತ್ರಣ ಮನಕಲಕುತ್ತದೆ. 'ಇನಿತೊಂದು ಹಲುಬಿ ಕಂಬನಿಯಿಡುವೆನವಗಾಗಿ ನೆನಪಾದರೂ ಇಹುದೆ ನನ್ನದವಗೆ?' ಎಂದು ಪ್ರಶ್ನಿಸುವ ನಲ್ಲೆಗೆ ಮರುಕ್ಷಣ ತನ್ನ ಬಗ್ಗೆ ತನಗೆ 'ಅಭಿಮಾನ' ಉಂಟಾಗಿ ಆತನ ಯೋಚನೆ ಬರಲು 'ಮುನಿಸು ಮೊಗದೋರಿ,

ನಾನೆನುವೆ ಇನಿತೇಕೆ ಮನದಲು ನನಗೆ?' ಎಂದು ಸಮಾಧಾನ ಪಟ್ಟುಕೊಳ್ಳುತ್ತಾಳೆ. 'ಮಿಂಚನ ಮಾಟ' ಕವಿತೆಯಲ್ಲಿ ಎಲ್ಲವೂ ಮಿಂಚಿ ಮಾಯವಾಗುವ ಪರಿ ನಲ್ಲೆಗೆ ಬೆರಗನ್ನುಂಟು ಮಾಡಿದೆ. ನಲ್ಲನೊಡನೆ ಕೂಡಿ ಸೊಗಸು ಪಡುವ ಕಾಲ ಎಂದು ಬರುವುದು ಎನ್ನುತ ನಲ್ಲೇ ವಿರಹದಿಂದ ಪರಿತಪಿಸುತ್ತಾಳೆ. ಉಡುಗೆ, ತೊಡುಗೆ, ಬಂಗಾರದ ಆಭರಣಗಳನ್ನು ತೊರೆದು ನಲ್ಲನನ್ನು ಬಯಸುವ ಹೆಣ್ಣಿನ ಚಿತ್ರಣ 'ಬೇಡವೆನಗಿನ್ನೇನು!' ಕವಿತೆಯಲ್ಲಿ ಮೂಡಿಬಂದಿದೆ. ಬಡತನದ ದೀನರ ಚಿತ್ರಣವು 'ಕೊರಗುತಿರುವೆದೆಗೆ ಬರೆ' ಕವಿತೆಯಲ್ಲಿದೆ. 'ಹಾರಯ್ಕೆ' ಕವಿತೆಯಲ್ಲಿ ಇನಿಯನನ್ನು ಬೇರೆಯಬೇಕೆಂಬ ನಲ್ಲೆಯ ಕಾತರದ ಚಿತ್ರಣವಿದೆ. ಇದು ಗಝಲ್ ಕವಿತೆಯಾಗಿದೆ. 'ಯಾವ ದಾರಿಯೋ!' ಈ ಕವಿತೆಯಲ್ಲಿ ಜೀವದರಸನನ್ನು ಕಾಣಲು ದಾರಿಯನ್ನು ಹುಡುಕುವ ನಾರಿಯ ಚಿತ್ರಣ ವಿಶಿಷ್ಟವಾಗಿ ಮೂಡಿಬಂದಿದೆ.

"ಯಾವ ದಾರಿಯೊ ಕಾಣೆ ನನ್ನಯ
ದೇವನಿರುವೆಡೆ ಸಾರಲು!
ಭಾವಿಸುತ ಬಾಯ್ದೆರೆದು ಕುಳಿತರೆ
ಸಾವೆ ಸರಿ! ಎಂಬಾ ವಿಚಾರದಿ
ಜೀವದರಸನದೆಲ್ಲಿರುವನಾ
ಠಾವನರಸುತ ತೆರಳಲಿರುವೆ;
ಯಾವ ದಾರಿಯೊ ಕಾಣೆ ನನ್ನಯ
ದೇವನಿರುವೆಡೆ ಸಾರಲು!"(ಪು.೧೨೧)

'ಉನ್ಮಾದಿನಿ' ಕವಿತೆಯಲ್ಲಿಯೂ ಆನಂದಕಂದರು ಹೆಣ್ಣಿನ ವಿರಹದ ಚಿತ್ರಣವನ್ನೇ ಕಾಣಿಸಿದ್ದಾರೆ. ಆಕೆ ಬಯಕೆಯ ಚಿತ್ರಣ ಇಲ್ಲಿದೆ. 'ಬಂದೆ ಬರುವನಂತೆ ಆತ, ಬಂದೆ ಬರುವನಂತೆ! ಚೆಂದದೊಸಗೆಯನ್ನು ಕೇಳಿ, ನವಿರ ಹೊರೆಯನಾಂತೆ, ನಿಂದೆ ಮರುಳೆಯಂತೆ.. ನಿಂದೆ ಮರುಳೆಯಂತೆ, ನೆರೆಯೆ ಮೈಮರೆವಿನ ಸಂತೆ' ಎನ್ನುತ್ತಾಳೆ. ಆಕೆಯ ನಲ್ಲನನ್ನು ಕಾಣುವ ಉನ್ಮಾದದಲ್ಲಿ ಆಕೆ ಎಲ್ಲವನ್ನು ಮರೆತಿದ್ದಾಳೆ. 'ನನ್ನ ಹಾಡು' ಕವಿತೆಯೂ ಇದಕ್ಕೆ ಹೊರತಲ್ಲ.

"ಬರಿಯೆ ಬಿಸುಸುಯಿಲಿಂದಲೀ ಹಗ
ಲಿರುಳ ಕಳೆಯುವುದೇನು
ಸರಿಯೆ! ಎನುತೇನೇನೊ ಹಾಡುತ
ಲಿರುವೆನೇಗಲು ನಾನು.
ನನ್ನ ಹಾಡುಗಳೆಲ್ಲವಿವು ಮನ
ದನ್ನ ನಿನಗಾಗಿರುವುವು;
ನನ್ನ ಹಾಡಿನ ವರ್ಣ-ವರ್ಣವು
ನಿನ್ನನೇ ಕುರಿತಿರುವುವು;
ನಿನ್ನ ನೆನಹನೆ ಮೊರೆವುವು...!
ನಿನ್ನ ನೆನಹನೆ ಮೊರೆವುವೆಲ್ಲವು
ನಿನ್ನ ಕರೆಯುತಲಿರುವುವು."[೬]

ಇಂಥ ವಿರಹದ ಪ್ರೀತಿ ಗೀತೆಗಳ ನಡುವೆ ಆನಂದಕಂದರು ರಚಿಸಿರುವ 'ಕೊಳ್ಳಿರಮ್ಮಾ ಹೂವ ಕೊಳ್ಳಿರಮ್ಮಾ!' ಎಂದು ಆರಂಭವಾಗುವ 'ಹೂವಡಿಗಿತ್ತಿ' ಕವನವು ಪ್ರೊ. ಎಂ.ವಿ. ಸೀತಾರಾಮಯ್ಯ ಅವರ 'ಹೂವಾಡಗಿತ್ತಿ' ಕವಿತೆಯನ್ನು ಸ್ಮರಣೆಗೆ ತರುತ್ತದೆ. ಆದರೂ ಅದಕ್ಕಿಂತಲೂ ಭೀನ್ನವಾಗಿ ನಿಲ್ಲುತ್ತದೆ. ಇಲ್ಲಿನ ಹೂವಾಡಗಿತ್ತಿಯ ಉದಾರತೆ ಮನವನ್ನು ಸೆಳೆಯುತ್ತದೆ.

ಆನಂದಕಂದರು ರಚಿಸಿರುವ 'ಶಬರಿಯ ಬಾಳು' ಕವಿತೆಯು ಒಂದು ಸ್ವತಂತ್ರವಾದ ಖಂಡ ಕಾವ್ಯದಂತೆ ಭಾಸವಾಗುತ್ತದೆ. 'ಒಬ್ಬಳೇ ಒಬ್ಬಳೀ ಕಗ್ಗಾಡಿನೊಳಗಿರುವೆ, ನನ್ನ ಹುಟ್ಟನು ತಿಳಿಯೆ, ಬಳೆದ ಬಗೆಯನ್ನರಿಯೆ, ನಾನರು...? ಬಂದೆನೆಲ್ಲಿಂದಿಲ್ಲಿ...? ಏತಕ್ಕೆ...?' ಎಂದು ಆರಂಭವಾಗುವ ಈ ಕವಿತೆಯಲ್ಲಿ ರಾಮನಿಗಾಗಿ ನಿರೀಕ್ಷೆಯಲ್ಲಿದ್ದ ಶಬರಿ ತಳೆದ ಆಶಾಭಾವ ಮನಸ್ಸನ್ನು ಕಲಕುತ್ತದೆ. "ಚಿರವಿರಹಿಣಿಯಾದ ಶಬರಿಯದು ಅಖಂಡವಾದ ಪ್ರೀತಿ (ಗಟಜುಜಿಜುಡುಟಣುಚಣಜಜ ಐಠತಜ). ಅದರಲ್ಲಿ ತಾಯಿಯ ವಾತ್ಸಲ್ಯವಿದೆ. ಮಗುವಿನ ಮುಗ್ಧತೆಯಿದೆ. ಯೌವನಿಗಳ ಪ್ರಣಯವಿದೆ. ಪ್ರಣಯಿನಿಯ ಬೇಡಿಕೆ, ವಿರಹಿಣಿಯ ನಿರೀಕ್ಷೆ-ನಿರಾಸೆ, ಭಕ್ತಿಯ ಅರ್ಪಣೆ-ತ್ಯಾಗ ಇವೆಲ್ಲವೂ ಬೆರೆತುಕೊಂಡಿವೆ. ಸಂಯೋಜಿತವಾಗಿವೆ. ಶಬರಿ ದಟ್ಟವಾದ ಕಗ್ಗಾಡಿನಲ್ಲಿ ಒಬ್ಬಂಟಿಯಾಗಿ ಬೆಳೆದಳು."[೭]

"ಹಕ್ಕಿ-ಮಿಗಗಳನೆಲ್ಲ ತಾಯಿಗಳು ಪಡೆಯುವವು,
ನನ್ನ ಪಡೆದವರಾರು...? ಎಲ್ಲವಾ ತಾಯಿಗಳು
ತಮ್ಮತಮ್ಮೆಳೆಯ ಹಿಳ್ಳೆಗಳನ್ನು ಮರಿಗಳನು
ಒಲವಿನಲಿ ಮುತ್ತಿಟ್ಟು, ಮೂಮೂಸಿ ಗುಟುಕಿತ್ತು,
ಮೊಲೆಯುಣಿಸಿ ಚಳಿಗಾಳಿಗಳ ತವಿಸಿ ಸಂತವಿಸಿ
ಬಳೆಯಿಸುವುದನ್ನು ನಾನು ದಿನದಿನವು ನೋಡುವೆನು;
ಎಳೆಯತನದಿಂದೆನ್ನನೊಲಿದು ಸಲಹಿದರಾರು?
ಬಳೆದುದೊಡ್ಡವಳಾದುದೆಂತು...? ತಿಳಿಯದಲಿಹೆನು."[೮]

"ಇಲ್ಲಿ ನಾವು ಕಾಣುವುದು ಶಬರಿಯ ಹೊರಮೈಯ ಚಿತ್ರವನ್ನಲ್ಲ. ಆಕೆಯ ಅಂತರಂಗದ ವರ್ಣದಿಂದ ಅಲಂಕೃತವಾದ ಅನುಭಾವ ಚಿತ್ರವನ್ನು. ಅಂತೆಯೇ 'ಮಾತು ಶಬರಿಯದಲ್ಲ ಬಗೆವೂನಲಿದಾಕೆಯದು' ಎಂಬ ಎರಡು ಸಾಲಿನ ಮುನ್ನುಡಿ ಇದಕ್ಕಿದೆ. ಇದಕ್ಕೆ ಉಪಯೋಗಿಸಿರುವ ಸರಳ ರಗಳೆಯ ಛಂದಸ್ಸು ತುಂಬ ಸೊಗಸಾಗಿ ಬಂದಿದೆ. ಆನಂದಕಂದರು ಬರೆದಿರುವ ಸರಳ ರಗಳೆಯ ಸಣ್ಣ ಕಾವ್ಯ ಇದೊಂದೇ ಆದರೂ ಒಂದೇ ಚಿನ್ನದೆಳೆಯ ಈ ಮುತ್ತಿನ ಸರ ಎಷ್ಟು ಚೆಲುವಾಗಿದೆ! ಭಾವದ ವಿರಿಳಿತ, ಚಿತ್ರಕಶಕ್ತಿ, ಶಬರಿಯ ಆತ್ಮಗತ ಮಾತುಗಳ ತುಯ್ದಾಟದ ನಿರೂಪಣಾ ಚಾತುರ್ಯ ಇವೆಲ್ಲವನ್ನೂ ಕರಗಿಸಿಕೊಂಡು ಹರಿದಿದೆ ಇಲ್ಲಿಯ ಛಂದಸ್ಸು. ಅದರ ಕೆಲವು ಸಾಲುಗಳನ್ನಾದರೂ ಇಲ್ಲಿ ಎತ್ತಿ ತೋರಿಸದಿದ್ದರೆ ತೃಪ್ತಿಯೆನಿಸದು."[೯] ಎಂಬ ಮಾತುಗಳು ನೈಜತೆಯಿಂದ ಕೂಡಿದ್ದು, ಶಬರಿಯು ತನ್ನ ಒಡನಾಡಿಯೊಬ್ಬ ಇರಬಹುದೆ, ತನ್ನನ್ನು ಅರಸುತ್ತ ತನ್ನೆಡೆಗೆ ಆತ ಬರಬಹುದೆ ಎಂಬ ಆಶೆಯಿಂದ ದಾರಿ ಕಾಯುವ ಪರಿ ವಿಶಿಷ್ಟವಾಗಿದೆ.

"ಎನಿತುಸೊಸಿನದು ಇಂದಿನ ದಿನವು! ಹಗಲು ಬರೆ
ಬಿರುಮುಗುಳು ಅರಳುವೊಲು ಎಡಬಿಡದೆ ನನ್ನೆದೆಯು
ಅರಳುತಿದೆ; ಅಡಿಯಿಂದ ಮುಡಿವರೆಗು ಮೈಯ ನರ-
ವುಬ್ಬುತಿವೆ.; ತುಂಬುದಿಂಗಳು ಮಿರುಗುವಿರುಳಲ್ಲಿ
ತೊರೆಯ ಸಿರಿಯನು ನೋಡೆ - ಸಂಜೆಯಾಗಸನೋಡೆ
ತಳಿತ ಬನವನು ನೋಡೆ - ಅಲರ ಕಾವಣ ನೋಡೆ-
ಎನಿಸುತಿಹ ಬಗೆಯನೆಲ್ಲವ ಬೆರಸಿದರು. ಇದಕೆ
ಹೊಂದಿಕೆಯೆನಿಸದಹಹ! ಇಂದಿನಂತಹ ದಿನವೆ
ಎಂದೆಂದು ಇದ್ದರದು ಅಂದವೆನಿತಾಗುವುದು...!"[೧೦]

ಶಬರಿಯ ವಿರಹವು 'ವಿರಹಿಣಿ' ಕವನ ಸಂಕಲನದ ಉಳಿದೆಲ್ಲ ಕವಿತೆಗಳಿಗಿಂತ ತುಂಬ ಭಿನ್ನ ಆಯಾಮವನ್ನು ಪಡೆದುಕೊಂಡಿದೆ. ಪ್ರಕೃತಿಯ ಜೀವ ಸಹಜವಾದ ಬಯಕೆ-ಬೇಡಿಕೆಗಳು, ಆಶೆ-

ಆಕಾಂಕ್ಷೆಗಳು, ಆಕರ್ಷಣೆ–ಸೆಳೆತಗಳು ವಿಶಿಷ್ಟವಾಗಿ ಮೂಡಿಬಂದಿವೆ. ದೇಸಿ ಬಂಧದಲ್ಲಿ ಮೂಡಿಬಂದಿರುವ 'ವಿರಹಿಣಿ' ಕವನ ಸಂಕಲನವು ಪ್ರೀತಿ–ಪ್ರೇಮ, ತ್ಯಾಗ, ವಿರಹದ ಸಂಕೀರ್ಣಭಾವಗಳನ್ನು ಒಳಗೊಂಡಿದೆ. ಈ ಕಾವ್ಯದ ವೈವಿಧ್ಯತೆ ಅಪಾರವಾಗಿದೆ. ಆನಂದಕಂದರ ಈ 'ವಿರಹಿಣಿ' ಕವನ ಸಂಕಲನದ ಕವಿತೆಗಳಲ್ಲಿ ಬೆಡಗು, ಭಿನ್ನಾಣ, ಕಾತರಿಕೆ, ಬಯಕೆ, ಪ್ರೀಯ ಇಲ್ಲವೇ ನಲ್ಲನನ್ನು ಕಾಣದ ನೋವು, ನಿರಾಸೆ, ಹತಾಸೆ ಮೊದಲಾದ ವಿರಹಗಳು ಪ್ರಕಟಗೊಂಡಿವೆ. ಇವು ದೇಸಿ ನೆಲೆಯಲ್ಲಿಯೇ ಪ್ರಕಟಗೊಂಡಿರುವುದು ಈ ಕವನ ಸಂಕಲನದ ವಿಶಿಷ್ಟತೆಯಾಗಿದೆ.

**ಕೊನೆ ಟಿಪ್ಪಣಿಗಳು**

೧. ರಾಘವೇಂದ್ರ ಪಾಟೀಲ, ; ಆನಂದಕಂದ, ಪುಟ. ೭೫ಯ
೨. ರಾಘವೇಂದ್ರ ಪಾಟೀಲ, ಸುರೇಶ್ ಬೆಟಗೇರಿ (ಸಂ.) ; ಬೆಳುವಲದ ಸುಗ್ಗಿ, ಆನಂದಕಂದರ ಸಮಗ್ರ ಕಾವ್ಯ, ಪುಟ. ೮೭
೩. ಅದೇ. ಪುಟ. ೯೧
೪. ಅದೇ. ಪುಟ. ೧೦೫
೫. ಅದೇ. ಪುಟ. ೧೦೯
೬. ಅದೇ, ಪುಟ. ೧೨೭
೭. ರಾಘವೇಂದ್ರ ಪಾಟೀಲ, ಆನಂದಕಂದ, ಪುಟ. ೭೭
೮. ರಾಘವೇಂದ್ರ ಪಾಟೀಲ, ಸುರೇಶ್ ಬೆಟಗೇರಿ (ಸಂ.); ಬೆಳುವಲದ ಸುಗ್ಗಿ, ಆನಂದಕಂದರ ಸಮಗ್ರ ಕಾವ್ಯ, ಪುಟ. ೧೩೫
೯. ಚನ್ನವೀರ ಕಣವಿ; ಆನಂದಕಂದರ ಕಾವ್ಯ: ಒಂದು ಸಮೀಕ್ಷೆ: ಪುಟ. ೧೦
೧೦.ರಾಘವೇಂದ್ರ ಪಾಟೀಲ, ಸುರೇಶ್ ಬೆಟಗೇರಿ (ಸಂ.) ; ಬೆಳುವಲದ ಸುಗ್ಗಿ, ಆನಂದಕಂದರ ಸಮಗ್ರ ಕಾವ್ಯ, ಪುಟ. ೧೩೭